ವಿಶ್ವಸಂಸ್ಥೆ, ಅಂತರರಾಷ್ಟ್ರೀಯ ಸೌಹಾರ್ದ – ಸ್ನೇಹಸಂಬಂಧಗಳ ಮೂಲಕ ಯುದ್ಧವೆಂಬ ಮಹಾಮಾರಿಯನ್ನು ತಡೆಯುವ ಪ್ರಯತ್ನಗಳು ನಡೆದವು. ಮಾರಕಾಸ್ತ್ರಗಳ ಬಳಕೆಯಿಂದ ಮಾನವ, ಪ್ರಾಣಿ–ಸಸ್ಯಸಂಕುಲ ಹಾಗೂ ಒಟ್ಟು ಪ್ರಕೃತಿಯ ಮೇಲೆ ಉಂಟಾಗುವ ದುಷ್ಪರಿಣಾಮ ನಮ್ಮೆಲ್ಲರ ಬದುಕನ್ನು, ಭೀಕರ ನಾಶದತ್ತ ಹೊರಳಿಸುವುದು ಎಂಬ ಅರಿವು ಎಲ್ಲೆಡೆ ಹಬ್ಬಿತು. ಆದರೆ ಈ ಎಲ್ಲ ಅರಿವಿನ ಫಲವಾಗಿ ವಿವಿಧ ದೇಶಗಳ ನಡುವೆ ಉಂಟಾಗಬೇಕಿದ್ದ ಸ್ನೇಹ–ಸಂಬಂಧಗಳು ಇತ್ತೀಚೆಗೆ ಅಪಾಯಕಾರಿ ಮಟ್ಟವನ್ನು ತಲುಪಿರುವುದು ಅತ್ಯಂತ ಆತಂಕವನ್ನು ಮೂಡಿಸಿರುವ ಸಂಗತಿಯಾಗಿದೆ.

## ಧಾರ್ಮಿಕ ಸೆಳೆತಗಳು

ಇಷ್ಟೊಂದು ಆಧುನಿಕ ಬೆಳವಣಿಗೆಗಳ ನಡುವೆಯೂ ಪ್ರಪಂಚದ ವಿವಿಧ ಚಲನೆಗಳನ್ನು ನಿರ್ಧರಿಸುವಲ್ಲಿ ಧರ್ಮವು ಪ್ರಧಾನ ಪಾತ್ರ ವಹಿಸರುವುದು ಗಮನಿಸಬೇಕಾದ ಸಂಗತಿಯಾಗಿದೆ. ಹಿಂದೆ ಹೇಳಿರುವ ಎರಡು ಚಲನೆಗಳು ಧಾರ್ಮಿಕ ಕ್ಷೇತ್ರದಲ್ಲಿ ವಿಭಿನ್ನ ರೀತಿಯಲ್ಲಿ ಕೆಲಸ ಮಾಡುತ್ತದೆ. ಮೇಲ್ನೋಟಕ್ಕೆ ಎಲ್ಲ ಧರ್ಮಗಳೂ ವಿಶ್ವಶಾಂತಿ, ವಿಶಾಲಭಾವನೆ, ಮಾನವೀಯತೆ, ಭ್ರಾತೃತ್ವವೇ ಮುಂತಾದ ಭಾವನೆಗಳನ್ನು ಹರಡುವುದಾದರೂ, ಈ ಧರ್ಮಗಳೇ ಪರಸ್ಪರ ಪೈಪೋಟಿ, ದ್ವೇಷ, ಮತಾಂತರ, ಧರ್ಮಯುದ್ಧ ಹಾಗೂ ಭಯೋತ್ಪಾದನೆಗಳಲ್ಲಿ ತೊಡಗಿರುವುದು ವಾಸ್ತವ ಸತ್ಯ. ಸಾಮಾಜಿಕ, ರಾಜಕೀಯ ಬದಲಾವಣೆಗಳಲ್ಲೂ, ಶಿಕ್ಷಣ, ಸಂಸ್ಕೃತಿ, ಆರ್ಥಿಕ ಚಟುವಟಿಕೆ ಮೊದಲಾದ ಕ್ಷೇತ್ರಗಳಲ್ಲೂ ಧಾರ್ಮಿಕ ಹಿತಾಸಕ್ತಿಗಳು ಬಲವಾದ ಹಿಡಿತವನ್ನು ಹೊಂದಿರುವುದು ಎಲ್ಲೆಡೆ ಕಂಡುಬರುತ್ತಿವೆ. 'ಇಷ್ಟೆಲ್ಲ ಅನಾಹುತಗಳನ್ನು ಸೃಷ್ಟಿಸುತ್ತಿರುವ ಧರ್ಮಗಳು ಯಾಕಾದರೂ ಇರಬೇಕು? ಅವುಗಳನ್ನು ನಿರ್ಮೂಲನ ಮಾಡಬಾರದೆ?' ಎಂದು ಪ್ರಶ್ನಿಸುವವರು ಇದ್ದಾರೆ. ಅಂತೆಯೇ, ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಕೇವಲ ಮಾನವವನು ಕಂಡುಕೊಳ್ಳಲಾರ; ಅದಕ್ಕೆ ಧಾರ್ಮಿಕ–ಆಧ್ಯಾತ್ಮಿಕ ಹಿನ್ನೆಲೆಯ ಪ್ರೇರಣೆ ಅತ್ಯಗತ್ಯ ಎಂದು ತಮ್ಮ ತಮ್ಮ ಧರ್ಮಗಳನ್ನು ಸಮರ್ಥಿಸಿಕೊಳ್ಳುವವರೂ ಇದ್ದಾರೆ. ಈ ಹಿನ್ನೆಲೆಯಲ್ಲಿ ಜಗತ್ತಿನ ಚಲನೆಗಳನ್ನು ಕಾಣಬೇಕು. ಮೇಲ್ನೋಟಕ್ಕೆ ಧರ್ಮಗಳು ವಿನಾಶಕಾರಿಯಾಗಿ ಕಂಡುಬರುತ್ತವೆ; ಆಂತರ್ಯದಲ್ಲಿ ಅವು ಶಾಂತಿ, ಸಾಮರಸ್ಯ, ವಿಶ್ವ ಭ್ರಾತೃತ್ವವನ್ನು ಹರಡುವ ಮಹಾಶಕ್ತಿಯಾಗಿ ಕೆಲಸ ಮಾಡುತ್ತವೆ. ಈ ದೃಷ್ಟಿಯಿಂದ ವಿಶ್ಲೇಷಿಸುತ್ತಾ, ಧರ್ಮಗಳ ನಿಜವಾದ ತಿರುಳೇನು, ಜಗತ್ತಿಗೆ ಅವು ನೀಡಿರುವ ಹೊಸ ಅರಿವು ಎಂತಹುದು, ಸರಿಯಾದ ದಿಕ್ಕಿನಲ್ಲಿ ಈ ಧಾರ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಜಗತ್ತನ್ನು ಪರಿಪೂರ್ಣ ಶಾಂತಿಯೆಡೆಗೆ ಕೊಂಡೊಯ್ಯುವ ಮಾರ್ಗವೇನು ಎಂಬುದನ್ನು ನಾವು ಕಂಡುಕೊಳ್ಳಬೇಕು.

## ನಿಜವಾದ ಧರ್ಮ

''ಧರ್ಮವು ಮಾನವಮೃಗವನ್ನು ದೇವನನ್ನಾಗಿ ಮಾಡಬಲ್ಲುದು. ಅದು ಮಾನವನಿಗೆ ಅನಂತತ್ವವನ್ನು ತರಬಲ್ಲುದು. ಮಾನವ ಸಮಾಜದಿಂದ ಧರ್ಮವನ್ನು ಕಳೆದುಬಿಟ್ಟರೆ ಇನ್ನು ಉಳಿಯುವುದೇನು? ಮೃಗಸದೃಶ ಕೊಂಪೆಯಲ್ಲದೆ ಮತ್ತೇನೂ ಇಲ್ಲ'' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು *(ಕೃತಿಶ್ರೇಣಿ, ಸಂ ೬, ಪು: ೪೧೧)*. ಧರ್ಮದ ತಿರುಳೇನು ಎಂಬುದನ್ನು ಹಲವು ತಾತ್ತ್ವಿಕ ದೃಷ್ಟಿಕೋನಗಳಿಂದ ಸ್ವಾಮೀಜಿ ವಿವರಿಸುತ್ತಾರೆ. ಆತ್ಮಸಾಕ್ಷಾತ್ಕಾರವೇ ನಿಜವಾದ ಧರ್ಮ, ಅದರಿಂದಲೇ ಎಲ್ಲ ನೈತಿಕತೆ, ಆಧ್ಯಾತ್ಮಿಕತೆ ಹೊರಡುವುದು ಎಂಬುದು ಅವರ ಬೋಧನೆಗಳ ಸಾರವಾಗಿದೆ.

ಧರ್ಮದಲ್ಲಿ ಮಾತ್ರವೇ ಶಾಶ್ವತ ಸತ್ಯ, ಶಾಶ್ವತ ಶಾಂತಿ ಹಾಗೂ ಶಾಶ್ವತ ಆನಂದದ ಭರವಸೆಯನ್ನು ನೀಡಲಾಗಿದೆ. ಅವ್ಯಕ್ತವಾಗಿರುವ ಶಕ್ತಿಯನ್ನು ದೇವರೆಂದೂ, ಸತ್ಯವೆಂದೂ, ಆದರ್ಶವೆಂದೂ ಆರಾಧಿಸುವ ಮೂಲಕ, ಜ್ಞಾನೋಪಾಸನೆಯ ಮೂಲಕ ಹಾಗೂ ಸಾಧನೆ – ತಪಸ್ಸುಗಳ ಮೂಲಕ ಅಂಥ ಮಹೋನ್ನತ ಸತ್ಯವನ್ನು ಅರಿತುಕೊಳ್ಳಬಹುದಾಗಿದೆ. ವೈಯಕ್ತಿಕ ನೆಲೆಯಲ್ಲಿ ಮಾತ್ರ ಈ ಆದರ್ಶಗಳನ್ನು ಪರಿಪೂರ್ಣವಾಗಿ ಹೊಂದಬಹುದಾದರೂ, ಧಾರ್ಮಿಕ ತತ್ತ್ವಗಳ ಅನುಷ್ಠಾನ ಸಾಮಾಜಿಕ, ಕೌಟುಂಬಿಕ ವಲಯಗಳ ಮೂಲಕ ಒಂದು ರಾಷ್ಟ್ರದ ಪರಿವರ್ತನೆಗೆ, ಆ ಮೂಲಕ ಒಟ್ಟು ಸಮಾಜದ ಶಾಂತಿ, ಆನಂದಗಳಿಗೆ ಕಾರಣವಾಗಬಹುದು ಎಂಬುದನ್ನು ವಿವಿಧ ಸಂಸ್ಕೃತಿ, ನಾಗರಿಕತೆಗಳು ತೋರಿಸಿಕೊಟ್ಟಿವೆ. ಗುರಿಯನ್ನು ತಲುಪುವ ವಿವಿಧ ಹಂತಗಳಲ್ಲಿ ಹಲವು ಬಗೆಯ ಹೋರಾಟಗಳಿವೆ; ಅವಕ್ಕೆ ವೈಯಕ್ತಿಕ ಹಾಗೂ ಸಾಮಾಜಿಕ ಮುಖಗಳಿವೆ. ಆದರೆ ಅವೆಂದೂ ಒಟ್ಟು ಜನಜೀವನವನ್ನು ಬಲಿ ತೆಗೆದುಕೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ ಆಯಾ ಸಮಾಜಕ್ಕಿರಬೇಕು. ಅವತಾರ ಪುರುಷರ ಹಾಗೂ ಆಧ್ಯಾತ್ಮಿಕ ಮಹಾಪುರುಷರ ಮಾರ್ಗವೆಂದೂ ಸಂಕುಚಿತ ಭಾವನೆಗಳಿಂದ ಕೂಡಿರಲಿಲ್ಲ ; ಅವರ ವಿಶಾಲಭಾವನೆ ಹಾಗೂ ವಿಶ್ವಶಾಂತಿಯ ಸಂದೇಶಗಳು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಬೇಕು. ಸಮಾಜವು ಸಮೃದ್ಧವೂ, ಶಾಂತಿದಾಯಕವೂ, ಆಧ್ಯಾತ್ಮಿಕವೂ ಆಗುವುದು ಇದರಿಂದಲೇ ಆಗಿದೆ. ಅಂಥ ಮಹಾತ್ಮರ ದಿವ್ಯ ಭಾವನೆಗಳನ್ನು ಸರಿಯಾಗಿ ಅರಿತುಕೊಳ್ಳಲಾಗದ ಹಾಗೂ ಆ ಭಾವನೆಗಳನ್ನು ತಮ್ಮ ಸಂಕುಚಿತ ಉದ್ದೇಶಗಳಿಗೆ ಬಳಸಿಕೊಳ್ಳುವ ಮತಾಂಧರಿಂದ ಸಮಾಜಕ್ಕೆ ವಿಶೇಷ ಹಾನಿಯುಂಟಾಗುವುದು. ಪ್ರಪಂಚದಲ್ಲಿ ಉಂಟಾಗಿರುವ ಎಲ್ಲ ಧಾರ್ಮಿಕ ಹಾನಿಗಳಿಗೆ ಕಾರಣ ಅವತಾರ ಪುರುಷರಲ್ಲ, ಪ್ರವಾದಿಗಳಲ್ಲ, ಋಷಿಮುನಿಗಳೋ, ಸಾಧುಸಂತರೋ ಅಲ್ಲ. ವೈಯಕ್ತಿಕ–ಸಾಮಾಜಿಕ ಬದುಕಿನಲ್ಲಿ ಧರ್ಮವನ್ನು ಪ್ರಾಮಾಣಿಕವಾಗಿ ಅನುಸರಿಸುತ್ತಿರುವ ಜನಸಾಮಾನ್ಯರೂ ಅಲ್ಲ. ತಪ್ಪುತಿಳುವಳಿಕೆ, ಅಜ್ಞಾನಗಳಿಂದ ಧರ್ಮದ ಅಮೂಲ್ಯ ಸತ್ಯಗಳನ್ನು ಹೀನ ಕೃತ್ಯಗಳಿಗಾಗಿ ಬಳಸುವ ಅಲ್ಪರು ಮಾತ್ರವೇ ಎಲ್ಲ ಅನಾಹುತಗಳಿಗೆ ನಿಜವಾಗಿ ಕಾರಣರಾಗುತ್ತಾರೆ. ಎಲ್ಲ ಸಮಾಜಗಳಲ್ಲೂ ಕಂಡು ಬರುವ ಪ್ರಜ್ಞಾವಂತರು ಇಂಥ ಶಕ್ತಿಗಳಿಂದ ಧರ್ಮ, ಅಧ್ಯಾತ್ಮವನ್ನು ರಕ್ಷಿಸಬೇಕು. ಆಗ ಸಮಾಜದ ಚಲನೆಗಳು ಸರಿಯಾದ ದಾರಿಯಲ್ಲಿ ಮುನ್ನಡೆಯುವುವು, ಧರ್ಮಗಳಲ್ಲಿ ಹೇಳಿರುವ ತತ್ತ್ವಗಳು ಶಾಂತಿ, ಪ್ರೇಮ, ಆನಂದಗಳನ್ನು ನೀಡಬಲ್ಲವು. ''ಶಾಶ್ವತ ಶಾಂತಿ ಭಗವತ್ ಸಾಕ್ಷಾತ್ಕಾರದಿಂದ ಮಾತ್ರ ಸಾಧ್ಯ'' ಎಂಬ ಮಾತು ಪ್ರಪಂಚದಲ್ಲಿ ಸತ್ಯವೆನಿಸುವುದು.